# ಕರ್ಮವೊಂದು ಆಧ್ಯಾತ್ಮಿಕ ಸಾಧನೆ

ಸ್ವಾಮಿ ಭಜನಾನಂದ

(ಹಿಂದಿನ ಸಂಚಿಕೆಯಿಂದ ಮುಂದುವರೆದುದು)

## ಕರ್ಮವೆಂದರೇನು ?

ಕರ್ಮವನ್ನು ಸಾಮಾನ್ಯವಾಗಿ "ಕೆಲಸ" ಎಂದು ಕನ್ನಡದಲ್ಲಿ ತರ್ಜುಮೆ ಮಾಡುತ್ತಾರೆ. ಆದರೆ ಈ ಎರಡೂ ಪದಗಳು ಸಮಾನಾರ್ಥವಲ್ಲ. ಯಾವ ಚಲನೆಯು ಶಕ್ತಿಯ ವರ್ಗಾವಣೆ ಅಥವಾ ಬದಲಾವಣೆಯನ್ನು ಉಂಟುಮಾಡುವುದೋ ಅದನ್ನೇ "ಕೆಲಸ" ಎಂದು ಕರೆಯುತ್ತಾರೆ. ಮೋಟಾರುಕಾರು ಕೆಲಸ ಮಾಡುವುದು, ಹಾಗೆಯೆ ಜಲಪಾತವೂ ಕೂಡ; ಆದರೆ ಈ ಕೆಲಸಗಳನ್ನು ನಾವು "ಕರ್ಮ" ಎಂದು ಕರೆಯುತ್ತೇವೆಯೇ? ಇಲ್ಲ. ಏಕೆಂದರೆ ಅವು ನಿರ್ಜೀವ ವಸ್ತುಗಳಿಂದ ಮಾಡಲ್ಪಟ್ಟ ಯಾಂತ್ರಿಕ ಕೆಲಸಗಳು. ಕೆಲಸವು ಕರ್ಮವಾಗಬೇಕಾದರೆ ಜೀವಂತ ವ್ಯಕ್ತಿಗಳಿಂದ ಮಾಡಲ್ಪಟ್ಟಿರಬೇಕು.

ಆದರೆ ಎಲ್ಲ ಜೈವಿಕ ಕ್ರಿಯೆಗಳನ್ನೂ ಕರ್ಮವೆಂದು ಕರೆಯಲಾಗುವುದಿಲ್ಲ ಎಂಬುದನ್ನು ನಾವು ಗಮನಿಸಬೇಕು. ನಮ್ಮ ದೇಹದೊಳಗೆ ಮಿಲಿಯಗಟ್ಟಲೆ ಜೀವಕಣಗಳು ನಿಶ್ಶಬ್ದವಾಗಿ ಕೆಲಸ ಮಾಡುತ್ತಿವೆ. ಆದರೆ ಇವು "ಕರ್ಮ" ಮಾಡುತ್ತಿವೆಯೆಂದು ಹೇಳಲಾಗುವುದಿಲ್ಲ. ರಕ್ತಚಲನೆ, ಆಹಾರ ಪಚನ, ಉಸಿರಾಟ ಮುಂತಾದ ನಮ್ಮ ಗಮನಕ್ಕೆ ಬಾರದ ಕಾರ್ಯಗಳು ಒಂದು ಕರ್ತೃವಿಗೆ ಸಂಬಂಧಿಸಲ್ಪಟ್ಟು, ಆ ಕರ್ತೃವೂ ಅವುಗಳನ್ನೆಲ್ಲ ಸಂಯೋಜಿಸಿ, ತನ್ನದು ಎಂಬ ಭಾವನೆ ಮೂಡಿದರೆ ಆಗ ಕರ್ಮವಾಗುತ್ತವೆ. ಆದ್ದರಿಂದ ಕರ್ಮದ ಎರಡನೆಯ ಲಕ್ಷಣವೇ "ಕರ್ತೃತ್ವ", "ನಾನು" ಎಂಬ ಭಾವ. ಈ "ನಾನು"ವಿನ ಭಾವದ ಅಭಾವವಾದರೆ, ಜೀವ ಕಣಗಳ, ವಿವಿಧ ಅಂಗಾಂಗಗಳ ಮತ್ತು ಇನ್ನಿತರ ಕೆಳಮಟ್ಟದ ಜೈವಿಕ ಕೆಲಸಗಳನ್ನು ಈ ಅನಂತ ವಿಶ್ವವಾಹಿನಿಯ ಭಾಗವೆಂದೂ ಗೀತೆಯು ಅಲ್ಲಿಲ್ಲಿ ಪ್ರಸ್ತಾಪಿಸುವ ವಿರಾಟ್‌ಪುರುಷನ ಸಮಷ್ಟಿಕರ್ಮದ ವಿವಿಧ ಅಂಗಾಂಗಗಳೆಂದೂ ತಿಳಿಯಬೇಕು.

**ನಮ್ಮ ಅರಿವಿಗೇ ಬಾರದಂತೆ ನಾವು ಮಾಡುವ ಪ್ರತಿಯೊಂದು ಕಾರ್ಯವೂ ಪ್ರತಿಯೊಂದು ಆಲೋಚನೆಯೂ ನೈತಿಕ ಆಯ್ಕೆ, ನಿರ್ಧಾರ ಮತ್ತು ಸಂಕಲ್ಪಗಳಿಂದ ಒಡಗೂಡಿದೆ.**

ಯಾವುದೋ ಫಲದ ಅನುಭವಕ್ಕಾಗಿ ಕರ್ತೃವು ತನ್ನನ್ನು ಕೆಲಸದಲ್ಲಿ ತೊಡಗಿಸಿಕೊಳ್ಳುತ್ತಾನೆ. ಪ್ರತಿಯೊಂದು ಕರ್ಮಕ್ಕೂ ಆಧಾರ ಸುಖಾನುಭವದ ನಿರೀಕ್ಷಣೆ. ಇದನ್ನೇ "ಭೋಕ್ತೃತ್ವ" ಎಂದು ಕರೆಯುತ್ತಾರೆ. ಇದು ಕರ್ಮದ ಮತ್ತೊಂದು ಲಕ್ಷಣ. ಆಸೆಗಳೇ ಈ ನಿರೀಕ್ಷಣೆಗೆ ಕಾರಣ ಮತ್ತು ಮನಸ್ಸೆಂಬುದು ಆಸೆಗಳ ಮೂಲಸ್ಥಾನ. ವಾಸ್ತವವಾಗಿ ಎಲ್ಲ ಸಾಮಾನ್ಯ ಕಾರ್ಯಗಳು ಮನಸ್ಸಿನ ಹೊರಮುಖದ ಅಭಿವ್ಯಕ್ತಿಯೇ.

ಮತ್ತೆ ಕರ್ಮವು ನೈತಿಕ ನಿರ್ಬಂಧನೆಗೊಳಗಾಗಿದೆ. ಕರ್ತೃವು ಕೇವಲ ಕ್ರಿಯೆಯನ್ನು ಮಾಡುವುದಲ್ಲ, ತಾನೇ ಅದಕ್ಕೆ ಹೊಣೆಗಾರನೆಂದೂ ಸಹ ತಿಳಿಯುವನು. ಹೊಣೆಗಾರಿಕೆಯ ಭಾವನೆಗೆ ಎರಡು ನಿಯಮಗಳು ಅತ್ಯಗತ್ಯ: ತನಗೆ ಬೇಕಾದ್ದನ್ನು ಆಯ್ದುಕೊಳ್ಳುವ ಸ್ವಾತಂತ್ರ್ಯ ಮತ್ತು ಸಾರ್ವತ್ರಿಕ ನೈತಿಕ ನಿಯಮಗಳಿಂದ ನಿಯಂತ್ರಣ. ನಮ್ಮೆಲ್ಲ ಕ್ರಿಯೆಗಳು ನೈತಿಕ ನಿಯಮ ಹಾಗೂ ಆದರ್ಶಗಳೊಂದಿಗೆ ಹೆಣೆಯಲ್ಪಟ್ಟಿವೆ ಮತ್ತು ನಮ್ಮ ಅರಿವಿಗೇ ಬಾರದಂತೆ ನಾವು ಮಾಡುವ ಪ್ರತಿಯೊಂದು ಕಾರ್ಯವೂ, ಪ್ರತಿಯೊಂದು ಆಲೋಚನೆಯೂ ನೈತಿಕ ಆಯ್ಕೆ, ನಿರ್ಧಾರ ಮತ್ತು ಸಂಕಲ್ಪಗಳಿಂದ ಒಡಗೂಡಿದೆ.

ಸೆಮಿಟಿಕ್ [semitic] ಧರ್ಮದ ನೈತಿಕತೆಯು ಈ ನಂಬಿಕೆಯನ್ನು ಆಧರಿಸಿದೆ: ಭಗವಂತ ಹಾಗೂ ಮಾನವನ ನಡುವೆ ಒಂದು ಒಪ್ಪಂದ ಇದೆ; ಅದರಂತೆ ಮಾನವನು ಭಗವಂತನ ನೈತಿಕಾಜ್ಞೆಗಳನ್ನು ಪರಿಪಾಲಿಸಿದರೆ, ಭಗವಂತನು ಆತನನ್ನು ರಕ್ಷಿಸುವನು. ಆದರೆ ನಮ್ಮ ಭಾರತೀಯ ಧರ್ಮಗಳಲ್ಲಿ ನೈತಿಕತೆಯು "ಕರ್ಮನಿಯಮ"ಗಳನ್ನು ಆಧರಿಸಿದೆ: ಪ್ರತಿಯೊಂದು ಕ್ರಿಯೆಗೂ ವಿಶ್ವಪರಿಣಾಮ (cosmic effect)ವೆಂಬುದೊಂದು ಇದೆ, ಮತ್ತು ಆ ಫಲವೇ ವ್ಯಕ್ತಿಯ ಮುಂದಿನ ಜನ್ಮ, ಜೀವನ ಹಾಗೂ ಪರಿಸರಗಳನ್ನು ನಿರ್ಧರಿಸುತ್ತದೆ. ಎರಡೂ ಅಭಿಪ್ರಾಯಗಳಿಂದಲೂ ಸಂಗತವಾಗುವ ವಿಷಯವೇನೆಂದರೆ ಮಾನವನ ಪ್ರತಿಯೊಂದು ಕ್ರಿಯೆಗೂ ಕಣ್ಣಿಗೆ ಕಾಣಿಸುವ ಫಲಕ್ಕಿಂತ ಮಿಗಿಲಾದ ಫಲವೊಂದಿದೆ, ಎಂಬುದು.

ಜೀವದೊಡನೆ ಸಂಬಂಧ, ಕರ್ತೃವಿನಿಂದ ಸಂಯೋಜನೆ, ಆಸೆಗಳಿಂದ ಪ್ರೇರಿತವಾಗಿರುವುದು, ನೈತಿಕ ಹೊಣೆಗಾರಿಕೆ ಮತ್ತು ಅನಿವಾರ್ಯ ವಿಶ್ವಪರಿಣಾಮ—ಇವು ಕರ್ಮವನ್ನು ಯಾಂತ್ರಿಕ ಕ್ರಿಯೆಗಳಿಂದ ಬೇರ್ಪಡಿಸುವ ಲಕ್ಷಣಗಳು. ಶ್ರೀಕೃಷ್ಣನು ಎಲ್ಲ ಕಾರ್ಯಗಳ ಹಿಂದೆ ಐದು ಕಾರಣಗಳಿವೆ ಎಂದು ಹೇಳುತ್ತಾನೆ: "ಮಾನವನು ಈ ದೇಹ, ಮನಸ್ಸು ಮತ್ತು ವಾಕ್‌ಗಳಿಂದ ಮಾಡುವ ಎಲ್ಲ ದುಷ್ಟ ಅಥವಾ ಶಿಷ್ಟ ಕಾರ್ಯಗಳ ಹಿಂದೆ ಈ ಐದು ಕಾರಣಗಳಿವೆ—ದೇಹ, ಕರ್ತೃ, ಇಂದ್ರಿಯಗಳು, ಪ್ರಾಣಶಕ್ತಿಯ ಚಲನೆ ಮತ್ತು ಅಲೌಕಿಕ ಶಕ್ತಿ"(ಭಗವದ್ಗೀತೆ, ೧೮:೧೪,೧೫). ಯಾವ ಕ್ರಿಯೆಯು ಈ ಐದು ಕಾರಣಗಳಿಂದ

ತೂಡಿಲ್ಲವೋ ಅವನ್ನು ಕರ್ಮ ಎಂದು ಕರೆಯಲಾಗುವುದಿಲ್ಲ. ಇದು ಅತ್ಯಂತ ಗಮನಾರ್ಹವಾದ ವಿಷಯ. ಏಕೆಂದರೆ ಈ ಐದು ಕಾರಣಗಳನ್ನು ನಿರ್ಮೂಲನಗೊಳಿಸುವುದರಿಂದ ಕರ್ಮಯೋಗವು ಬಂಧನವನ್ನು ಕತ್ತರಿಸುವ ಆಧ್ಯಾತ್ಮಿಕ ಸಾಧನೆಯಾಗುವುದು.

## ಕರ್ಮ ಮತ್ತು ಪ್ರಜ್ಞೆ

ಆಧ್ಯಾತ್ಮಿಕ ಸಾಧನೆಯೆಂದರೆ ಉನ್ನತ ಪ್ರಜ್ಞಾಸ್ತರಗಳಿಗಾಗಿ ಹೋರಾಟ. ಕರ್ಮಯೋಗವು ಹೇಗೆ ಇದಕ್ಕೆ ಸಹಾಯಕವಾಗುವುದೆಂದು ತಿಳಿಯಬೇಕಾದರೆ ಕರ್ಮ ಹಾಗೂ ಪ್ರಜ್ಞೆಯ ನಡುವಿನ ಸಂಬಂಧದ ಅರಿವು ಬೇಕು. ಕರ್ಮ ಎಂದರೆ ಜೀವದಲ್ಲಿನ ಕ್ರಿಯೆ ಅಥವಾ ಚಲನೆ ಎಂಬುದನ್ನು ಹಿಂದೆಯೇ ನೋಡಿರುವೆವು. ಜೀವ ಮತ್ತು ಪ್ರಜ್ಞೆ ಇವೆರಡೂ ಒಂದೇ ಆಗಿದೆಯೇ ಅಥವಾ ಅವುಗಳಲ್ಲಿ ವ್ಯತ್ಯಾಸವಿದೆಯೇ ಎಂಬುದನ್ನು ನೋಡಬೇಕು. ಪಾಶ್ಚಾತ್ಯ ಚಿಂತನೆ ಹಾಗೂ ಜೆನ್[Zen]ಬೌದ್ಧಧರ್ಮದ ಪ್ರಭಾವದಿಂದ ಜೀವ ಮತ್ತು ಪ್ರಜ್ಞೆಯ ಅರ್ಥದ ನಡುವೆ ಗೊಂದಲವುಂಟಾಗಿದೆ. ಅವು ಇವೆರಡೂ ಒಂದೇ ಎಂದು ತಿಳಿಯುತ್ತವೆ. ಆದರೆ ಅನೇಕ ಹಿಂದೂಧರ್ಮಗಳು ಜೀವ ಮತ್ತು ಪ್ರಜ್ಞೆ ಎರಡೂ ವಿಭಿನ್ನವೆಂದು ನಂಬುತ್ತವೆ. ಹಿಂದೂಧರ್ಮವು ವ್ಯಕ್ತಿತ್ವವನ್ನು ತ್ರಿವಿಧವಾಗಿ ವಿಭಜನೆಗೊಳಿಸುವುದು. ಅಂದರೆ ದೇಹ, ಮನಸ್ಸು ಮತ್ತು ಚೈತನ್ಯ ಅಥವಾ ಆತ್ಮ ಎಂದು ಮೂರು ಪ್ರತ್ಯೇಕ ಭಾಗಗಳಾಗಿ ವಿಂಗಡಿಸುವುದು. ವೇದಾಂತದ ಪ್ರಕಾರ ಪ್ರಜ್ಞೆಯು ಕೇವಲ ಬ್ರಹ್ಮ ಮತ್ತು ಆತ್ಮನಿಗೆ ಸಂಬಂಧಿಸಿದುದು. ಮನಸ್ಸೂ ಸೇರಿ ಉಳಿದವುಗಳೆಲ್ಲ ಜಡ ಅಥವಾ ಅಚೈತನ್ಯ ಸ್ವರೂಪವಾದ ಪ್ರಕೃತಿಗೆ ಸೇರಿವೆ. ಜೀವಿ ಪ್ರಕೃತಿಯ ಒಂದು ವಿಶೇಷ ಅಭಿವ್ಯಕ್ತಿಯಷ್ಟೆ.

ಉಪನಿಷತ್ತುಗಳಲ್ಲಿ "ಜೀವ"ಕ್ಕೆ "ಪ್ರಾಣ" ಎಂಬ ಶಬ್ದವನ್ನು ಬಳಸಲಾಗಿದೆ. ಕಠೋಪನಿಷತ್( ೨.೩.೨) "ಈ ವಿಶ್ವವೆಲ್ಲವೂ ಪ್ರಾಣದಿಂದಲೇ ಹೊರಬಂದಿದೆ ಹಾಗೂ ಅದರಿಂದಲೇ ಸ್ಪಂದಿಸುತ್ತಿದೆ" ಎನ್ನುತ್ತದೆ. ಇದನ್ನು ಶುದ್ಧಚೈತನ್ಯ ಅಥವಾ ಬ್ರಹ್ಮದಲ್ಲಿ ತನ್ನ ಬೇರುಗಳನ್ನು ಹೊಂದಿರುವ ಮತ್ತು ತಲೆಕೆಳಕಾಗಿರುವ ಅಶ್ವತ್ಥವೃಕ್ಷದಂತೆ ಚಿತ್ರಿಸಲಾಗಿದೆ. ಪ್ರಶ್ನೋಪನಿಷತ್‌ನಲ್ಲೂ ಪ್ರಾಣವನ್ನು ವಿಶ್ವದ ಜೀವನಿಯಮವೆಂದು ಕರೆಯಲಾಗಿದೆ ಹಾಗೂ ಅದನ್ನು ಪರಮಾತ್ಮನಲ್ಲಿ ನೆಲೆಗೊಂಡಿರುವ ಅರಗಳುಳ್ಳ ಬೃಹತ್ ಚಕ್ರದಂತೆ ಚಿತ್ರಿಸಲಾಗಿದೆ (೨.೬;೩.೩;೬.೬). ಬೃಹದಾರಣ್ಯಕ ಉಪನಿಷತ್ ಪ್ರಾಣವನ್ನು ಪ್ರಜಾಪತಿ ಅಥವಾ ಹಿರಣ್ಯಗರ್ಭ, ವಿಶ್ವಾತ್ಮ ಎಂದು ಕರೆಯುತ್ತದೆ ಮತ್ತು ವ್ಯಕ್ತವಾದ ಈ ವಿಶ್ವವೆಲ್ಲವೂ ಕೇವಲ ನಾಮ ರೂಪ ಮತ್ತು ಕರ್ಮಗಳಲ್ಲದೆ ಮತ್ತೇನೂ ಅಲ್ಲವೆನ್ನುತ್ತದೆ. ಅಗ್ನಿಯಿಂದ ಕಿಡಿಗಳು ಹೊಮ್ಮುವಂತೆ, ಜೇಡನಿಂದ ಜೇಡರ ಬಲೆ ಮೂಡುವಂತೆ, ಈ ಇಡೀ ವಿಶ್ವವು ಬ್ರಹ್ಮನಿಂದ ಬಂದಿದೆ. ಪ್ರಾಣವು ಸತ್ಯವಾದರೆ ಬ್ರಹ್ಮ ಸತ್ಯದ ಸತ್ಯ (**ಸತ್ಯಸ್ಯ ಸತ್ಯಮ್**— ೧.೬.೧; ೨.೧.೨೦) ಆಗಿರುತ್ತದೆ.

ತಂತ್ರಗಳಲ್ಲಿ ಪ್ರಾಣವನ್ನು ಇಡಾ, ಪಿಂಗಳ ಮತ್ತು ಸುಷುಮ್ನಾ ಎಂಬ ಮೂರು ನಾಡಿಗಳಲ್ಲಿ ಹರಿಯುವ ಮಾನಸಿಕ ಶಕ್ತಿ ಎಂದು ಕರೆಯಲಾಗಿದೆ. ಈ ಶಕ್ತಿಯ ಬಹುಭಾಗವು "ಕುಂಡಲಿನಿ"ಯ ರೂಪದಲ್ಲಿ ಸುಪ್ತಾವಸ್ಥೆಯಲ್ಲಿದೆ ಮತ್ತು ಜಾಗೃತಗೊಳಿಸಿದಾಗ ಅದು ಸುಷುಮ್ನಾದ ಮೂಲಕ ಹರಿಯುತ್ತಾ ಪ್ರತಿಯೊಂದು ಚಕ್ರ ಅಥವಾ ಕೇಂದ್ರಬಿಂದುವಿನಲ್ಲಿ ಹೊಸ ಹೊಸ ರೀತಿಯ ಅರಿವನ್ನು ನೀಡುತ್ತದೆ.

**ಆತ್ಮ ಮತ್ತು ಜೀವದ ಸಂಬಂಧವೇ ಬಂಧನ ಹಾಗೂ ಅವೆರಡನ್ನು ಬೇರ್ಪಡಿಸುವುದೇ ಮುಕ್ತಿ.**

ಕರ್ಮವನ್ನೊಳಗೊಂಡು, ಜೀವದ ಎಲ್ಲ ಅಭಿವ್ಯಕ್ತಿಗಳೂ ಶುದ್ಧ ಚೈತನ್ಯಕ್ಕಿಂತ ಭಿನ್ನವಾದುವುಗಳು ಹಾಗೂ ಅವು ಚೈತನ್ಯದೊಡನೆ ಸಂಬಂಧಿಸಿವೆ ಅಥವಾ ಅದನ್ನು ಆಧರಿಸಿವೆ ಎಂಬುದು ಮೇಲಿನ ವಿವರಣೆಗಳಿಂದ ಸ್ಪಷ್ಟವಾಗಿ ತಿಳಿಯುವುದು. ಆತ್ಮ ಮತ್ತು ಜೀವದ ಸಂಬಂಧವೇ ಬಂಧನ ಹಾಗೂ ಅವೆರಡನ್ನು ಬೇರ್ಪಡಿಸುವುದೇ ಮುಕ್ತಿ.

## ಕರ್ಮ ಮತ್ತು ಬಂಧನ

ಆತ್ಮವು ಜೀವದೊಡನೆ ಹೇಗೆ ಬೆಸುಗೆಯಾಯಿತು ಎಂಬುದು ಇನ್ನೂ ಸ್ಪಷ್ಟವಾಗಿ ತಿಳಿದಿಲ್ಲ. ಅದ್ವೈತವು ಜೀವನವೆಂಬುದೊಂದು "ಮಾಯೆ" ಎಂದು ಹೇಳಿ ಈ ಸಮಸ್ಯೆಯನ್ನು ಬಗೆಹರಿಸುವುದು. ಆದರೆ ಈ ವ್ಯಾವಹಾರಿಕ ಅನುಭವಗಳಿಗೆ ವಿವರಣೆ ನೀಡಲು ಎರಡು ವಿಧದ ಆತ್ಮಗಳನ್ನು ನಿರೂಪಿಸುತ್ತದೆ: ಸಾಕ್ಷಿ ಅಥವಾ ಸಾಕ್ಷಿಚೈತನ್ಯ ಮತ್ತು ಕರ್ತೃ. ಸಾಕ್ಷಿಚೈತನ್ಯವು ಶುದ್ಧ, ಸ್ವಯಂ ಜ್ಯೋತಿ, ಮುಕ್ತ, ಅನಂತ ಆತ್ಮ. ಈ ನೈಜ ಆತ್ಮವು ಬುದ್ಧಿಯಿಂದ ಆವರಿಸಿದಾಗ ವ್ಯಾವಹಾರಿಕ ಆತ್ಮವೆನಿಸಿ ಕ್ರಿಯೆಗಳ ಕರ್ತೃವಾಗುತ್ತದೆ. ಬಂಧನವೆಂಬುದು ಕೇವಲ ಈ ವ್ಯಾವಹಾರಿಕ ಆತ್ಮಕ್ಕೆ. ಶ್ರೀರಾಮಾನುಜರು ಹಾಗೂ ಇತರ ವೇದಾಂತ ಆಚಾರ್ಯರ ಪ್ರಕಾರ ಇರುವುದು ಒಂದೇ ಆತ್ಮ, ಅದೇ ಸಾಕ್ಷಿಯೂ ಹೌದು, ಕರ್ತೃವೂ ಹೌದು. ಸ್ವರೂಪತಃ ಶುದ್ಧವೂ ಜ್ಯೋತಿಸ್ವರೂಪವೂ ಪರಬ್ರಹ್ಮನ ಒಂದು ಅಂಶವೂ ಆದ ಈ ಆತ್ಮನನ್ನು ಮನಸ್ಸಿನ ಅಶುದ್ಧತೆಯು ಆವರಿಸಿದಾಗ ಅದು ಕ್ರಿಯೆಯೊಂದಿಗೆ ಬಂಧಿತವಾಗುತ್ತದೆ.

ಎಲ್ಲ ಹಿಂದೂದರ್ಶನಗಳೂ ಆತ್ಮವು ನಿರ್ವಿಕಾರವೆಂದು ಏಕಕಂಠದಿಂದ ಒಪ್ಪುತ್ತವೆ ಹಾಗೂ ಬದಲಾವಣೆ, ಚಲನೆ, ಕ್ರಿಯೆಗಳು ಪ್ರಕೃತಿಯ ರೂಪಾಂತರಗಳಾದ ಮನಸ್ಸು ಮತ್ತು ದೇಹಕ್ಕೆ ಸಂಬಂಧಿಸಿದವೇ ಹೊರತು ಆತ್ಮಕ್ಕಲ್ಲವೆನ್ನುತ್ತವೆ.

ಆದ್ದರಿಂದ ಕರ್ಮ ಕೇವಲ ಪ್ರಕೃತಿಗೆ ಸಂಬಂಧಿಸಿದೆ. ಆತ್ಮವು ಪ್ರಕೃತಿಯ ಚಲನೆಯನ್ನು ತನಗೆ ಸಂಬಂಧಿಸಿಕೊಂಡು ತನ್ನನ್ನೇ ಕರ್ತೃ ಎಂದು ತಿಳಿಯುತ್ತದೆ. ಈ ಸಂಬಂಧವುಂಟಾಗುವುದು ಇಚ್ಛೆಯ ಮೂಲಕ. ಈ ಇಚ್ಛಾಶಕ್ತಿಯೇ ಬಂಧಿತವಾಗಿರುವುದು. ಪ್ರತಿಯೊಂದು ಕ್ರಿಯೆಯ ಹಿಂದೆಯೂ ಇಚ್ಛಾಶಕ್ತಿಯ ಅನುಮೋದನೆ ಇದೆ.

ಇಚ್ಛಾಶಕ್ತಿ ಮತ್ತು "ನಾನು" ಎಂಬ ಪ್ರಜ್ಞೆ—ಇವು ಆತ್ಮದ ಕ್ರಿಯಾ ಮತ್ತು ಸ್ಥಿತಿರೂಪಗಳು. ಇಚ್ಛಾಶಕ್ತಿಯು ಚೈತನ್ಯವನ್ನು ಹೊರಹೊಮ್ಮಿಸುವ ಒಂದು ಸಾಧನ. ಹೇಗೆ "ನಾನು" ಎಂಬುದು ತನ್ನ ನೈಜರೂಪದಲ್ಲಿ ಶುದ್ಧ ಹಾಗೂ ಮುಕ್ತವೋ, ಹಾಗೆಯೇ ವಾಸ್ತವವಾಗಿ ಇಚ್ಛಾಶಕ್ತಿಯೂ ಮುಕ್ತ. ಆದರೆ ಅದು ಆಸೆಗಳಿಂದ ಬದ್ಧವಾಗಿದೆ. ನಾವು ಮಾಡುವ ಅಧಿಕಾಂಶ ಕರ್ಮಗಳು ಈ ಅಶುದ್ಧ, ಬಂಧಿತ ಇಚ್ಛಾಶಕ್ತಿಯಿಂದ ಪ್ರೇರಿತವಾಗಿರುತ್ತವೆ. ಇಚ್ಛೆ ಮತ್ತು ಕ್ರಿಯೆಯ ನಡುವೆ ಆಸೆಗಳು ತಲೆದೋರಿ ಕ್ರಿಯೆಯನ್ನೇ ಬದಲಾಯಿಸಿಬಿಡುತ್ತವೆ. ಈ ಇಚ್ಛಾಶಕ್ತಿಯನ್ನು ಆಸೆಗಳ ಹಿಡಿತದಿಂದ ಮುಕ್ತಗೊಳಿಸಿದರೆ, ನಾವು ಮಾಡುವ ಕ್ರಿಯೆಗಳೆಲ್ಲ ಶುದ್ಧ ಇಚ್ಛಾಶಕ್ತಿಯಿಂದ ಪ್ರೇರೇಪಿತವಾಗುವುವು.

## ಕರ್ಮ ಮತ್ತು ಮುಕ್ತಿ

ಹಿಂದಿನ ಅನುಭವಗಳ ಸಂಸ್ಕಾರಗಳು ಮನಸ್ಸಿನಲ್ಲಿ ಚಿಗುರೊಡೆದು "ಆಸೆ"ಗಳೆನಿಸುತ್ತವೆ. ಹಿಂದೂ ಆಚಾರ್ಯರ ಅಭಿಪ್ರಾಯದಲ್ಲಿ ಪ್ರತಿಯೊಂದು ಕ್ರಿಯೆ ಅಥವಾ ಅದನ್ನು ಹಿಂಬಾಲಿಸುವ ಅನುಭವ ಎರಡು ಪರಿಣಾಮಗಳನ್ನು ಉಂಟುಮಾಡುತ್ತವೆ. ಮೊದಲೇ ಹೇಳಿದಂತೆ, ಒಂದು ವಿಶ್ವಪರಿಣಾಮ (cosmic effect). ಇದು ಕರ್ಮಫಲದ ರೂಪದಲ್ಲಿ ಕರ್ತೃವಿಗೇ ಹಿಂತಿರುಗಿ ಆತನ ಮುಂದಿನ ಜೀವನವನ್ನು ನಿರ್ಧರಿಸುತ್ತದೆ. ವೈಯಕ್ತಿಕವಾಗಿ, ಸಂಸ್ಕಾರ ಅಥವಾ ಸೂಕ್ಷ್ಮಮುದ್ರೆಯನ್ನು ಮನಸ್ಸಿನ ಮೇಲೆ ಒತ್ತುವುದೇ ಎರಡನೆಯ ಪರಿಣಾಮ. ಆದರೆ ಈ ಸಂಸ್ಕಾರಗಳು, ಮೊದಲನೆಯ ಪರಿಣಾಮದಂತೆ ರದ್ದುಪಡಿಸಲೂ ಅಥವಾ ಬದಲಾಯಿಸಲೂ ಆಗದ ಕರ್ಮಫಲಗಳಂತೆ ಅಲ್ಲ. ಸಂಸ್ಕಾರಗಳನ್ನು ಬದಲಾಯಿಸಬಹುದು. ಉದಾಹರಣೆಗೆ ಒಬ್ಬಾತನು ಕೆಟ್ಟ ಕೆಲಸ ಮಾಡಿದರೆ ಒಂದು ಕೆಟ್ಟ ಸಂಸ್ಕಾರ ಮನಸ್ಸಿನಲ್ಲಿ ಉಂಟಾಗುವುದು ಹಾಗೂ ನೋವಿನಿಂದ ಕೂಡಿದ ಕರ್ಮಫಲವೂ ಉಂಟಾಗುತ್ತದೆ. ಪಶ್ಚಾತ್ತಾಪ, ಪ್ರಾರ್ಥನೆ, ಸದಾಚಾರದಿಂದ ಆ ಕೆಟ್ಟ ಸಂಸ್ಕಾರವನ್ನು ಬದಲಾಯಿಸಬಹುದು. ಆದರೆ ತಪ್ಪದೆ ಆತನೆಡೆಗೆ ಬೆನ್ನಟ್ಟಿ ಬರುವ ನೋವಿನಿಂದ ಕೂಡಿದ ಕರ್ಮಫಲವನ್ನು ಮಾತ್ರ ಬದಲಾಯಿಸಲು ಸಾಧ್ಯವಿಲ್ಲ. ಇದೇ ಕರ್ಮನಿಯಮ. ಇದರ ಪ್ರಕಾರ ಪರಿಸ್ಥಿತಿಗಳನ್ನು ಬದಲಾಯಿಸುವ ಸ್ವಾತಂತ್ರ್ಯ ನಮಗಿಲ್ಲ, ಆದರೆ ನಮ್ಮ ಮನಸ್ಸನ್ನು ನಾವು ಬದಲಾಯಿಸಿಕೊಳ್ಳಬಹುದು ಮತ್ತು ಸನ್ನಿವೇಶವನ್ನು ಎದುರಿಸುವ ಶಕ್ತಿಯನ್ನು ಪಡೆಯಬಹುದು.

ಪತಂಜಲಿಯ ಅಭಿಪ್ರಾಯದಲ್ಲಿ ಸಂಸ್ಕಾರಗಳು ಎರಡು ವಿಧ : ಕರ್ಮಾಶಯ ಹಾಗೂ ವಾಸನೆ. ಪ್ರತಿಯೊಂದು ಕ್ರಿಯೆ ಅಥವಾ ಅನುಭವವೂ ಮತ್ತೊಮ್ಮೆ ಅಂತಹುದೇ ಕ್ರಿಯೆಯನ್ನು ಮಾಡಲು ಅಥವಾ ಅನುಭವವನ್ನು ಪಡೆಯಲು ಪ್ರಚೋದಿಸುತ್ತದೆ. ಒಂದು ಸಿಗರೇಟು ಸೇದಿದ ನಂತರ ಮತ್ತೊಂದನ್ನು ಸೇದಲು ಪ್ರಚೋದನೆಯುಂಟಾಗುತ್ತದೆ. ಈ ಪ್ರಚೋದನೆ ಅಥವಾ ಆಸೆಯನ್ನು ಹುಟ್ಟಿಸುವ ಸಂಸ್ಕಾರಕ್ಕೆ "ಕರ್ಮಬೀಜ" ಎಂದು ಹೆಸರು. ಮನಸ್ಸಿನಲ್ಲಿರುವ ಎಲ್ಲ ಕರ್ಮಬೀಜಗಳ ಮೊತ್ತವನ್ನೇ "ಕರ್ಮಾಶಯ" ಎನ್ನುತ್ತಾರೆ ಪತಂಜಲಿ (ಪತಂಜಲಿ, ಯೋಗ ಸೂತ್ರ, ೨.೧೨.೧೩). ಪಾಶ್ಚಾತ್ಯ ಮನಶ್ಶಾಸ್ತ್ರಜ್ಞರ "ಹುಟ್ಟರಿವಿ"ಗೆ ಇದನ್ನು ಹೋಲಿಸಬಹುದು. ನಮ್ಮನ್ನು ಕ್ರಿಯೆಯಲ್ಲಿ ತೊಡಗಿಸುವ ನಮ್ಮೆಲ್ಲಾ ಆಸೆಗಳು, ಪ್ರೇರೇಪಣೆಗಳು, ಪ್ರವೃತ್ತಿಗಳು—ಅವು ಒಳ್ಳೆಯವಿರಲಿ ಅಥವಾ ಕೆಟ್ಟವಿರಲಿ—ಅವೆಲ್ಲವೂ ಈ ಕರ್ಮಾಶಯದ ಚಿಗುರುವಿಕೆಯೇ. ನಮ್ಮ ಮುಂದಿನ ಜನ್ಮ (ಜಾತಿ), ಆಯುಸ್ಸು ಮತ್ತು ಭೋಗಗಳನ್ನು ಅಂದರೆ ಸುಖದುಃಖಾನುಭವಗಳನ್ನು, ಈ ಕರ್ಮಾಶಯವೇ ನಿರ್ಧರಿಸುತ್ತದೆ ಎನ್ನುತ್ತಾರೆ ಪತಂಜಲಿ.

**ಪರಿಸ್ಥಿತಿಗಳನ್ನು ಬದಲಾಯಿಸುವ ಸ್ವಾತಂತ್ರ್ಯ ನಮಗಿಲ್ಲ, ಆದರೆ ನಮ್ಮ ಮನಸ್ಸನ್ನು ನಾವು ಬದಲಾಯಿಸಿಕೊಳ್ಳಬಹುದು ಮತ್ತು ಸನ್ನಿವೇಶವನ್ನು ಎದುರಿಸುವ ಶಕ್ತಿಯನ್ನು ಪಡೆಯಬಹುದು.**

ಪ್ರತಿಯೊಂದು ಅನುಭವವೂ ಮನಸ್ಸಿನ ಮೇಲೆ ಎರಡನೇ ರೀತಿಯ ಸಂಸ್ಕಾರ ಅಂದರೆ "ವಾಸನೆ" ಎಂಬುದನ್ನು ಉಂಟುಮಾಡುತ್ತದೆ ಮತ್ತು ಇದೇ ಮುಂದೆ "ನೆನಪಿಗೆ" ಅವಕಾಶವೀಯುತ್ತದೆ (ಅದೇ, ೪.೮.೯). ಸಿಗರೇಟು ಸೇದುವ ಅಭ್ಯಾಸವನ್ನು ಗೆದ್ದ ವ್ಯಕ್ತಿಯು ತನ್ನ ಹಿಂದಿನ ಸೇದುವ ಅನುಭವವನ್ನು ಪ್ರಚೋದನೆ ಇಲ್ಲದೆ ನೆನಪಿಸಿಕೊಳ್ಳಬಹುದು. ಇದು ಅನುಭವಗಳ ನೆನಪು ಹಾಗೂ ಮತ್ತೊಮ್ಮೆ ಅನುಭವಿಸುವ ಪ್ರೇರಣೆ ಎರಡೂ ಬೇರೆ ಬೇರೆ ಎಂಬುದನ್ನು ತೋರಿಸುತ್ತದೆ.

ಆದರೆ ಸಾಮಾನ್ಯವಾಗಿ ನೆನಪು ಹಾಗೂ ಪ್ರೇರಣೆ ಎರಡರಲ್ಲೂ ಎಂತಹ ಅನ್ಯೋನ್ಯ ಸಂಬಂಧವಿದೆಯೆಂದರೆ ಒಂದು ಮತ್ತೊಂದನ್ನು ಯಾಂತ್ರಿಕವಾಗಿ ಜಾಗೃತಗೊಳಿಸುತ್ತದೆ. ಕರ್ಮಾಶಯ ಹಾಗೂ ವಾಸನೆ ಎರಡೂ ಒಟ್ಟಿಗೆ ಮನಸ್ಸಿನಲ್ಲಿ ಮುದ್ರಿತವಾಗಿರುತ್ತವೆ ಮತ್ತು ಎರಡರ ನಡುವೆ ಅನ್ಯೋನ್ಯ ಸಂಬಂಧವಿರುತ್ತದೆ. ಆದರೆ ಅವು ಮನಸ್ಸಿನ ಎರಡು ಬಗೆಯ ಕ್ರಿಯೆಗಳನ್ನು ಪ್ರತಿನಿಧಿಸುತ್ತವೆ ಮತ್ತು ಇವುಗಳ ಭೇದವನ್ನು ತಿಳಿದಿರುವುದು ಮುಖ್ಯ. ನೆನಪು ಎಂದರೆ ನಾಮ, ರೂಪಗಳ ಕಲ್ಪನೆ. ಕೇವಲ ನೆನಪಿನಿಂದಲೇ ಏನೂ ತೊಂದರೆಯಿಲ್ಲ. ಆದರೆ ಆಸೆ ಅಥವಾ ಪ್ರೇರಣೆಗಳು ಹಾಗಲ್ಲ. ಅವು ದೈಹಿಕ ಬದಲಾವಣೆಗಳನ್ನುಂಟುಮಾಡಿ ಮನಸ್ಸನ್ನು

ಆಸೆಯ ವಸ್ತುಗಳೆಡೆಗೆ ಎಳೆದುಬಿಡುವುವು. ದ್ವೇಷ, ಭಯ, ಮುಂತಾದವುಗಳನ್ನು ತನ್ನ ಸ್ವಾಧೀನದಲ್ಲಿರಿಸಿಕೊಂಡ ವ್ಯಕ್ತಿಯಲ್ಲಿ ಅವುಗಳಿಗೆ ಸಂಬಂಧಿಸಿದ ಕಾಲ್ಪನಿಕ ಚಿತ್ರಗಳು ಮೂಡಿದರೂ ಅವು ಭಾವೋದ್ರೇಕವನ್ನುಂಟುಮಾಡುವುದಿಲ್ಲ. ಮನಸ್ಸಿನಲ್ಲಿ ಕೇವಲ ಚಿತ್ರಗಳು ಮೂಡಿದರೆ ಭಯವೇನಿಲ್ಲ, ಆದರೆ ಅವುಗಳನ್ನು ತಪ್ಪು ಭಾವೋದ್ರೇಕಗಳಿಗೆ ಸಂಬಂಧಿಸಿದರೆ ಅಪಾಯ ಖಂಡಿತ. ನೆನಪು ಹಾಗೂ ಪ್ರೇರಣೆಗಳ (ಅಂದರೆ ವಾಸನೆ ಹಾಗೂ ಕರ್ಮಬೀಜಗಳ) ನಡುವಿನ ಸಂಬಂಧ ಒಂದು ರೀತಿಯ ಅಭ್ಯಾಸದ ಬಲದಿಂದ ಮೂಡಿದ ರೂಢ ಪ್ರತಿವರ್ತನೆ(conditioned reflex). ಆದರೆ ಈ ಸಂಬಂಧವನ್ನು ವಿವೇಕ, ಪ್ರಾರ್ಥನೆ ಮತ್ತು ಪ್ರಯತ್ನಗಳಿಂದ ಮುರಿಯಬಹುದು. ಮಾನವನ ಅತಿ ಹೆಚ್ಚಿನ ದುಃಖಗಳಿಗೆ ತಾರುಣ್ಯಾವಸ್ಥೆಯಲ್ಲಿ ದುಸ್ಸಂಗದಿಂದಾಗಿ ನಾಮ, ರೂಪಗಳನ್ನು ಕೆಟ್ಟ ಭಾವಗಳೊಂದಿಗೆ ಸಂಬಂಧ ಕಲ್ಪಿಸಿರುವುದೇ ಕಾರಣ.

ನಮ್ಮ ಈಗಿನ ಉದ್ದೇಶಕ್ಕೆ ಮುಖ್ಯವಾಗಿ ನೆನಪಿನಲ್ಲಿಡಬೇಕಾದ ಅಂಶವೆಂದರೆ ಕರ್ಮಾಶಯಗಳಿಂದ ಉಂಟಾದ ಆಸೆ ಅಥವಾ ಪ್ರೇರಣೆಗಳು ಮಾತ್ರವೇ ಆತ್ಮನನ್ನು ಬಂಧಿಸುತ್ತವೆಯೇ ಹೊರತು ವಾಸನೆಗಳಿಂದ ಉಂಟಾದ “ನೆನಪು”ಗಳಿಂದ ಅಲ್ಲ. ಇಚ್ಛೆ ಎಂಬ ಕ್ರಿಯಾತ್ಮಕ ಶಕ್ತಿಯು ಪ್ರೇರಣೆ ಅಥವಾ ಆಸೆಗಳೊಡನೆ ಮಾತ್ರವೇ ಸಂಬಂಧಿಸುತ್ತದೆ ಮತ್ತು ಇದೇ ಆತ್ಮನ ಬಂಧನಕ್ಕೆ ಕಾರಣ. ಕರ್ಮವೇ ಆಸೆಗೆ ಮೂಲಕಾರಣ. ಸಿಗರೇಟನ್ನು ಎಂದೂ ಸೇದದ ವ್ಯಕ್ತಿಗೆ ಸೇದಬೇಕೆಂಬ ಆಸೆಯೇ ಮೂಡುವುದಿಲ್ಲ. ಹೆಚ್ಚೆಂದರೆ ಆತನಿಗೆ ಕುತೂಹಲವಿರಬಹುದು. ಕರ್ಮದಿಂದಲೇ ಮನಸ್ಸಿನಲ್ಲಿ ಕರ್ಮಾಶಯ ಉಂಟಾಗುವುದು ಹಾಗೂ ಇದನ್ನು ಇಚ್ಛಾಶಕ್ತಿಯೊಡನೆ ಸಂಬಂಧಿಸುವುದೂ ಕರ್ಮವೇ. ಆದ್ದರಿಂದ ಇವೆರಡರ ಪರಿಣಾಮವನ್ನು ಕರ್ಮದಿಂದಲೇ ನಾಶಗೊಳಿಸಲು ಸಾಧ್ಯ. ಸತ್ಕರ್ಮಗಳಿಂದ ದುಷ್ಕರ್ಮಗಳ ಪರಿಣಾಮವನ್ನು ನಿಷ್ಫಲಗೊಳಿಸಬಹುದು. ಕರ್ಮವೇ ಸುಪ್ತ ಆಸೆಗಳನ್ನು ಕೆರಳಿಸುವುದು ಮತ್ತು ಕರ್ಮವೇ ಅದನ್ನು ನಾಶಗೊಳಿಸುವುದು. ದುಷ್ಕರ್ಮದ ಪರಿಣಾಮಗಳನ್ನು ಕೇವಲ ಆಲೋಚನೆಗಳಿಂದಲೇ ನಿಷ್ಕ್ರಿಯಗೊಳಿಸಲಾಗದು. ಇದರಿಂದ ಆಂಶಿಕ ಜಯ ದೊರೆತರೂ ಕೂಡ ಅದನ್ನು ಕ್ರಿಯೆಯ ಮುಖಾಂತರವೇ ವಾಸ್ತವ ಜೀವನದಲ್ಲಿ ಪರೀಕ್ಷಿಸಿ ನೋಡಬೇಕು. ಆದ್ದರಿಂದಲೇ ಕರ್ಮಯೋಗವು ಮನಸ್ಸನ್ನು ಪರಿಶುದ್ಧಗೊಳಿಸಲು ಅನಿವಾರ್ಯ ಸಾಧನ. ಆದ್ದರಿಂದಲೇ ಶಂಕರಾಚಾರ್ಯರು, ನ ಹಿ ಅಚಲತೋ ಶುದ್ಧಿರಸ್ತಿ, —“ಯಾರಲ್ಲಿ ಚಲನೆಯಿಲ್ಲವೋ, ಅಂದರೆ ಕೆಲಸವಿಲ್ಲವೊ, ಅವರಿಗೆ ಪರಿಶುದ್ಧಿ ಎನ್ನುವುದೇ ಇಲ್ಲ” ಎನ್ನುತ್ತಾರೆ.

(ಮುಂದುವರಿಯುತ್ತದೆ.)

## ಕಳೆದುಹೋದ “ವಚನವೇದ” ಮರಳಿ ಪಡೆದಾಗ

ಶ್ರೀರಾಮಕೃಷ್ಣರ ಭಕ್ತವೃಂದದಲ್ಲಿ “ಹೊಸ ಭಾಗವತ” “ಪಂಚಮವೇದ” “ವಚನವೇದ” ಎಂದೆಲ್ಲ ಪ್ರಸಿದ್ಧವಾದ ಮಹಾಗ್ರಂಥವನ್ನು ಬರೆದ ಮಾಸ್ಟರ್ ಮಹಾಶಯರು ತಮ್ಮ ದಿನಚರಿಯಲ್ಲಿ ಬರೆದ ವೃತ್ತಾಂತದ ವರದಿ: ೧೯೨೪ರ ಜನವರಿ ೧೫ನೇ ತಾರೀಖು ಮಾಸ್ಟರ್ ಮಹಾಶಯರು ಭವಾನಿಪುರದಿಂದ ಹಿಂದಿರುಗುವಾಗ ಈ ದಿನಚರಿಯ ಪುಸ್ತಕವನ್ನು ಮರೆತು ಟ್ರಾಮ್‌ನಲ್ಲೇ ಬಿಟ್ಟು ಇಳಿದು ಹೋದರು. ಈ ಘಟನೆಯ ಕುರಿತು “ಮ” ಹೀಗೆ ಬರೆಯುತ್ತಾರೆ: “ಮನೆಗೆ ಬಂದಮೇಲೆ ಬೆಳಿಗ್ಗೆ ಹನ್ನೊಂದು ಗಂಟೆಗೆ ದಿನಚರಿಯ ಪುಸ್ತಕವು ಕಳೆದುಹೋದದ್ದು ಗಮನಕ್ಕೆ ಬಂತು. ನನ್ನ ಮಗನನ್ನೇ ಕಳೆದುಕೊಂಡಷ್ಟು ವೇದನೆ, ದುಃಖವಾಯಿತು ನನಗೆ. ಟ್ರಾಮ್ ಇಳಿದು ಕಾಳಿಯ ದರ್ಶನಕ್ಕೆ ಹೋಗಿದ್ದ ಕಾರಣ ತಕ್ಷಣವೇ ಕಾಳಿಮಂದಿರಕ್ಕೆ ಹೋಗಿ ಅಲ್ಲಿ ವಿಚಾರಿಸಿದೆ. ಅಲ್ಲಿ ಸಿಗಲಿಲ್ಲ. ನಂತರ ಮೂರುಕಾಲು ಗಂಟೆಗಳ ಕಾಲ ಬೀದಿಯೆಲ್ಲೆಲ್ಲ ತಡಕಾಡಿದೆ. ಟ್ರಾಮ್‌ನಲ್ಲಿ ನಾನು ಪಡೆದಿದ್ದ ಟಿಕೆಟನ್ನು ಹರಿದುಹಾಕಿ ಬೀದಿಯಲ್ಲಿ ಬಿಸಾಡಿದ್ದೆ. ಬಿಸಾಡಿದ ಟಿಕೆಟ್‌ನ ಚೂರುಗಳನ್ನೆಲ್ಲ ಆರಿಸಿ ಮನೆಗೆ ತಂದು ಎಲ್ಲಾ ಚೂರುಗಳನ್ನು ಜೋಡಿಸಿ ಅಂಟಿಸಿ, ಟಿಕೆಟ್ ನಂಬರನ್ನು ಕಂಡುಹಿಡಿದೆ. ಟಿಕೆಟ್ ನಂಬರ್‌ನ ಸಹಾಯದಿಂದ ಟ್ರಾಮ್ ಕಂಡಕ್ಟರ್‌ನನ್ನು ಪತ್ತೆ ಮಾಡಲು ಸಾಧ್ಯವಾಯಿತು. ಆ ಕಂಡಕ್ಟರ್‌ನನ್ನು ವಿಚಾರಿಸಲಾಗಿ, ಆತ ಒಂದು ಪುಸ್ತಕವನ್ನು ಬಸ್‌ಡಿಪೋಗೆ ತಲುಪಿಸಿರುವುದಾಗಿ ತಿಳಿಸಿದ. ದಿನಚರಿ ಪುಸ್ತಕದ ಮೇಲೆ “ಜಯರಾಂಬಾಟಿ” ಎಂದು ಬರೆದಿದ್ದನ್ನು ಮೇಲ್ವಿಚಾರಕರೊಬ್ಬರು ಓದಿ ಆತ ಶ್ರೀರಾಮಕೃಷ್ಣರ ಭಕ್ತರಾಗಿದ್ದರಿಂದ ಅದನ್ನು ಅವರು ತಮ್ಮ ಬಳಿ ಜೋಪಾನವಾಗಿ ಇರಿಸಿಕೊಂಡಿದ್ದರಂತೆ.

“ನಾನು ಸಂಜೆಯೆಲ್ಲ ಅತ್ಯಂತ ಕಾತರತೆ, ಕಳಕಳಿಯಿಂದ ಠಾಕೂರರಿಗೆ ಪ್ರಾರ್ಥನೆ ಸಲ್ಲಿಸಿದ್ದೆ. ಅತ್ಯಂತ ದುಗುಡವಾದ ಮನಸ್ಸಿನಿಂದ ದಿನವೆಲ್ಲಾ ಪ್ರಾರ್ಥನೆಯಲ್ಲೇ ಕಳೆದೆ. ಎರಡು ದಿನಗಳ ನಂತರ ಪುಸ್ತಕ ದೊರೆತಾಗ ಎಂತಹ ಆನಂದ ! ಪುಸ್ತಕವನ್ನು ತರುವಾಗ ಮತ್ತೆ ಅದು ಕಳೆದುಹೋದೀತೇನೊ ಎಂಬ ಆತಂಕ, ಭಯ ಮನಸ್ಸನ್ನೆಲ್ಲ ಆವರಿಸಿತ್ತು. ಭಕ್ತ-ಭಗವಾನ್-ಭಾಗವತ ಒಂದೇ ಎಂದು ಹೇಳುತ್ತಿದ್ದರು ಶ್ರೀರಾಮಕೃಷ್ಣರು. ಈ ದಿನಚರಿಯ ಪುಸ್ತಕವೂ ಶಬ್ದಬ್ರಹ್ಮ. ಇದನ್ನು ನಾನು ಪ್ರತಿದಿನವೂ ಪೂಜಿಸುತ್ತಿದ್ದೆ, ನನ್ನ ಬಳಿಯೇ ಸದಾ ಇರಿಸಿಕೊಳ್ಳುತ್ತಿದ್ದೆ.”

(ಸಂಗ್ರಹ : ಸ್ವರ್ಣಗೌರಿ)